ನೋಡಿದ್ದೀನಿ."

"ಹಾಂ... ಉತ್ತಯ್ಯ ಬೆಟ್ಟಪ್ಪನ ಹೆಸರಲ್ಲಿ ಬಾಡಿಗೆಗೆ ಪಡೆದ. ಪೀಟರನಿಗೆ ಬೆಟ್ಟಪ್ಪನ ಪರಿಚಯವಿರಲಿಲ್ಲ. ಬೆಟ್ಟಪ್ಪನ ಆಧಾರ್ ಕಾರ್ಡಿನ ಕಲರ್ ಜೆರಾಕ್ಸ್ ಪ್ರತಿ ಮಾಡಿ, ಅದರಲ್ಲಿ ತನ್ನ ಚಿತ್ರ ಅಂಟಿಸಿದ್ದಾನೆ! ಅದರ ಪ್ರತಿಯೂ ಇಲ್ಲಿದೆ... ಉತ್ತಯ್ಯ ತಾನೇ ಬೆಟ್ಟಪ್ಪ ಅಂತ ಹೇಳಿ, ಸಹಿ ಹಾಕಿದ್ದಾನೆ. ಆತ ನಿಮ್ಗೆ ತೋರಿಸಿದ ಕಾಗದ ಪತ್ರದಲ್ಲಿಯೂ ಆತನದ್ದೇ ಸಹಿ ಇರಬೇಕು... ಬೆಟ್ಟಪ್ಪ, ಇದು ನಿನ್ನ ಸಹಿಯೆ?" ಕರಮಚಂದ ಗಣಕಯಂತ್ರದಲ್ಲಿ ಬಾಡಿಗೆ ಪತ್ರದ ಸ್ಕ್ಯಾನ್ಡ್ ಪ್ರತಿಯನ್ನು ತೋರಿದ.

"ಅಲ್ಲ ಸಾರ್, ಇದು ನನ್ನ ಸಹಿಯಲ್ಲ... ಇನ್ನೊಂದು ವಿಷ್ಯ ನೆನಪಾಯ್ತು... ಸೋಮಯ್ಯರ ರಿವಾಲ್ವರ್ ನೋಡಿ ನಾನು ಉತ್ತಯ್ಯನಿಗೆ ಹಿಂದಿರುಗಿಸಿದ್ದೆ. ಅವ್ನು ಬಹುಶಃ ಬೆರಳಚ್ಚು ಅಳಿಸದೇ ಹಾಗೇ ಒಳಗಿರಿಸಿದ್ದ. ಅವ್ನಿಗೆ ಬೆರಳಚ್ಚು ಇರುವುದು ಚೆನ್ನಾಗಿ ಗೊತ್ತಿತ್ತು." ಬೆಟ್ಟಪ್ಪ ನೆನಪು ಮಾಡಿಕೊಂಡ.

"ಹಾಗಿದ್ದರೆ ಕೊಲೆ ಮಾಡಿದ್ದು ಉತ್ತಯ್ಯ ಅಂತ ನೀವು ಹೇಳೋದೆ?"

"ಖಂಡಿತವಾಗಿಯೂ!... ಆ ದಿನ ಅವ್ನು ಬಿಟ್ಟಂಗಾಲದಲ್ಲಿ ಇರಲೇ ಇಲ್ಲ. ಅವ್ನ ಮೊಬೈಲು ಮಾತ್ರ ಬಿಟ್ಟಂಗಾಲದಲ್ಲಿರುವ ಆತನ ಮಿತ್ರನ ಹತ್ತಿರವಿತ್ತು. ಉತ್ತಯ್ಯನ ದುರದೃಷ್ಟ ನೋಡಿ! ಆತನ ಮಿತ್ರ ಅದರಿಂದ ಒಂದು ಕರೆ ಮಾಡಿದ್ದ ತನ್ನಿಂದ ಸಾಲ ಪಡೆದವನೊಬ್ಬನಿಗೆ. ಆ ಸಾಲಗಾರನ ಮೊಬೈಲಿನಲ್ಲಿ ಎಲ್ಲಾ ಅನಾಮಧೇಯ ಸಂಖ್ಯೆಗಳಿಂದ ಬಂದ ಕರೆಗಳು ರೆಕಾರ್ಡ್ ಆಗುವಂತಹ ಸೆಟ್ಟಿಂಗ್ ಇತ್ತು. ಉತ್ತಯ್ಯನ ಮಿತ್ರ ಆತನಲ್ಲಿ ಉತ್ತಯ್ಯ ಫೋನನ್ನು ಇಲ್ಲಿ ಇಟ್ಟು ಹೋಗಿದ್ದಾನೆ, ಅದರಿಂದ ಕರೆ ಮಾಡಿದ್ದೇನೆ ಎಂದು ನಿಜ ಹೇಳ್ದ. ಅದರ ಧ್ವನಿಮುದ್ರಿಕೆ ನನ್ನಲ್ಲಿದೆ. ಇನ್ನೊಂದು ಸಾಕ್ಷಿ, ಆ ಹಳೆಯ ಕಟ್ಟಡದ ಎದುರಿರುವ ಷೋರೂಮಲ್ಲಿ ಸಿಸಿಟೀವಿ ಇದೆ. ಅದರಲ್ಲಿ ಒಂದು ಕ್ಯಾಮೆರಾ ರಸ್ತೆಗೆ ಮುಖ ಮಾಡಿದೆ. ಅದರಲ್ಲಿ ಸುಮಾರು ಮೂರು ಮುಕ್ಕಾಲರ ಹೊತ್ತಿಗೆ ಉತ್ತಯ್ಯ ಆ ಕಟ್ಟಡದಿಂದ ಹೊರಬರುತ್ತಿರುವುದು ದಾಖಲಾಗಿದೆ! ಅಲ್ಲಿಂದ ಆತ ಬಸ್ ನಿಲ್ದಾಣದ ಕಡೆ ನಡೆದಿದ್ದಾನೆ ತಾನು ಬಸ್ಸಿನಲ್ಲಿ ಬಂದೆ ಎಂದು ಬಿಂಬಿಸಲು!"

"ಹೌದೇ? ನೀವೇಕೆ ಮೊದಲೇ ತಿಳಿಸಲಿಲ್ಲ?"

"ಅದೆಲ್ಲಾ ನಿನ್ನೆ, ಇಂದಿನ ತನಿಖೆಯ ಫಲಿತಾಂಶಗಳು. ನನ್ಗೆ ಆ ದಿನ ಕೆಲವು ವಿಷ್ಯಗಳು ಉತ್ತಯ್ಯನ ಮೇಲೆ ಅನುಮಾನ ಮೂಡಿಸಿದವು. ಮೊದಲನೇದು, ಸೋಮಯ್ಯನ ಗಣಕಯಂತ್ರದಲ್ಲಿ ಡ್ರಾಪ್ ಬಾಕ್ಸಿನಲ್ಲಿ ಒಂದು ಫೈಲು ಡಿಲೀಟ್ ಆಗಿದ್ದನ್ನು ಗಮನಿಸಿದೆ. ಡ್ರಾಪ್ ಬಾಕ್ಸಿನಲ್ಲಿ ಡಿಲೀಟ್ ಆದ ಫೈಲುಗಳು ಮೂವತ್ತು ದಿನಗಳವರೆಗೆ ಇರುತ್ತದೆ. ಅಲ್ಲಿ ನೋಡಿದಾಗ ಅದು ಚಂದ್ರಕುಮಾರನಿಗೆ ಸಂಬಂಧಿಸಿದ ಫೈಲುಗಳು. ಜೊತೆಗೆ ಕಪಾಟಿನಲ್ಲಿ ಇನ್ನೂರ ಹತ್ತನೇ ಫೈಲು ಕಾಣೆಯಾಗಿತ್ತು. ಅಲ್ಲಿದ್ದ ಫೈಲು ಇಂಡೆಕ್ಸ್ ನೋಡಿದಾಗ ಅದು ಚಂದ್ರಕುಮಾರನಿಗೆ ಸಂಬಂಧಿಸಿದ್ದೆಂದು ತಿಳಿಯಿತು. ಅಲ್ಲಿಗೆ ಚಂದ್ರಕುಮಾರನಿಗೂ, ಕೊಲೆಗೂ ನಂಟಿದೆ ಅಂತ ಊಹಿಸಿದೆ. ಎರಡನೆಯದು, ಕುರ್ಚಿಯ ಕಾಲಿನ ಬಳಿ ಇದ್ದ ಗೀರುಗಳು ಮತ್ತು ತೂತು. ಸೂಕ್ಷ್ಮವಾಗಿ ಗಮನಿಸಿದಾಗ, ಅದರ ಮರ್ಮ ಅರಿವಾಯಿತು. ಅದು ಕುರ್ಚಿ ಚಲಿಸದಂತೆ 'ಯು' ಆಕಾರದ ಕಬ್ಬಿಣದ ಕ್ಲಾಂಪ್ ಹೊಡೆಯಲು ಬಳಸಿದ್ದು! ಅದರ ಉದ್ದೇಶ ಕುರ್ಚಿ ಚಲಿಸಬಾರದು!! ಯಾಕೆ? ಚಲಿಸಿದರೆ ಕಿಟಕಿಯಿಂದ ಗುಂಡು ಹೊಡೆಯಲು ಗುರಿ ತಪ್ಪುತ್ತೆ!! ಆಗ ನನ್ನ ಗಮನ ಹೊರಗೆ ಹೋಯಿತು. ಮತ್ತೆ ಹೊರಗಡೆ ಬಂದು ಆ ಕಟ್ಟಡವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಕಿಟಕಿಯ ಕುರುಹು ಕಂಡಿತು. ಹೇಗೆ ಗೊತ್ತೆ? ಅಷ್ಟು ಜಾಗದಲ್ಲಿ ಬಣ್ಣ ತುಸು ಭಿನ್ನವಾಗಿತ್ತು. ಅಲ್ಲಿಂದಲೇ ಗುಂಡು ಹಾರಿಸಿದ್ದಾರೆ ಅಂತ ಮನದಟ್ಟಾಯಿತು."

"ಆದರೆ ಉತ್ತಯ್ಯ ಅಷ್ಟು ಹೇಗೆ ಮೊದಲೇ ಯೋಜನೆ ಹಾಕಿದ?"